634

ಮೈಸೂರು ಸಬ್ ಜಡ್ಜ್ರೀಯವರ ಕೋರ್ಟ್‌ನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ ಮೈಸೂರು ಮಂಡೀಮಹಲಾದಲ್ಲಿ ಇರುವ ಪೊಲೀಸ್ ಜವಾ೯ ಷೇಕ್ ಯಿಸಮಾಯಿಲ್ ಯಂಬವನ ವಿಷಯದಲ್ಲಿ—

ಸ೯ 1888ನೇ ಇಸವಿ ದಿವಾಳೀ ಕೇಸ್ ನಂಬರ್ 383.

ಹುಕುಂ.

ಮೇಲ್ಕಂಡ ಷೇಕ್ ಯಿಸ್ಮಾಯಿಲ್‌ನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟಅರ್ಜೀ ಅಂಕವು ಈ ಕೋರ್ಟು ರೂಬರೂ ಅರ್ಜೀದಾರನಾದ ಷೇಕ್ ಯಿಸ್ಮಾಯಿಲ್ ಖುದ್ದು ಹಾಜರು—ಮತ್ತು ಸದರಿಯವನ ಲೇಣೇದಾರ್‌ರ ಪರವಾಗಿ ದರ್ಖಾಸ್ತೀ ಮಾಡಲ್ಪಟ್ಟಿತು.

ಆ ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್‌ರು ತಮಗೆ ಈ ದರ್ಖಾಸ್ತೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರಂದರೆ—1ನೇ ಯೆತಿರಾಜಸಂಪತ್ತು ಮೂರ ಬ್ಯಾಂಕ್, 2ನೇ ಮೈಸೂರು ಧನಾಭಿವೃದ್ಧೀ ಬ್ಯಾಂಕ್, 3ನೇ ಟರ್ಫ್‌ಬ್ಯಾಂಕು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಷೇಕ್ ಯಿಸ್ಮಾಯಿಲ್‌ನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನು ನಿರ್ಬಂಧದಿಂದ ವಿನೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ಥಿರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನು ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ೯ 1889ನೇ ಇಸವಿ ಜೂ೯ 5ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಂ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರ್.	ಲೇಣೇದಾರ್‌ರು ಅಥವಾ ದಾವಾದಾರ್‌ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣೇ ಕೊಟ್ಟದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಯಿದ್ದರೆ.	ಷರಾ.
1	ಮೈಸೂರು ಯೆತಿರಾಜಸಂಪತ್ತು ಮೂರ ಬ್ಯಾಂಕು.	75—0—0	..	ಡಿಕ್ರೀ ಬಾಬತು	

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ಹಾನನ ಡಿಸ್ಟ್ರಿಕ್ಟ್.

ತಾರೀಖು 30ನೇ ಮೇ 1889.

1. ಆದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಹಾನನ ಡಿಸ್ಟ್ರಿಕ್ಟು ಮಂಜಿರಾಬಾದು ತಾಲ್ಲೂಕಿನ ಈ ಕೆಳಗೆ ನಮೂದಾಗಲ್ಪಡುವ ಜಮೀ೯ ಕಾಫೀ ಸಾಗುವಳಿಗೋಸ್ಕರ ಇದರ ಕೆಳಗಿನ ಸ್ಟೇಟ್‌ಮೆಂಟಿನ ಷರಾ ಕಾಲಂನಲ್ಲಿ ನಮೂದಾಗುವ ತಾರೀಖು ಮತ್ತು ಸ್ಥಳದಲ್ಲಿ ಮಂಜಿರಾಬಾದು ತಾಲ್ಲೂಕು ಅಮಲ್ದಾರ್‌ರವರ ರೂಬರೂ ಹಾನನ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ವ್ಯೊಳಪಟ್ಟು ಹರಾಜ್ ಮಾಡಿಸಲ್ಪಡುವದು.

2. ಈ ಹರಾಜ್ ಬಹಿರಂಗವಾಗಿ ದಸ್ತೂರ್ ಷರತ್ತು ಅನುಸರಿಸಿ ಗೊತ್ತಾಗಲ್ಪಟ್ಟ ಎಕರೆಗೆ 10 ರೂಪಾಯಿಗಳ ಮೇಲೆ ಚಡ ದರಖಾಸ್ತು ಮಾಡುವದರೆ ಹೆಸರಿಗೆ ಖೈದ್ ಮಾಡಲ್ಪಡುವದು. ದರಖಾಸ್ತುದಾರನಿಂದ ಹಾಜರ್ಮಾಡಲ್ಪಟ್ಟು ಗೊತ್ತಾಗಲ್ಪಟ್ಟ ಖರೀದಿಯ ನಾಲ್ಕರಲ್ಲಿ ಒಂದು ಭಾಗದ ಡಿಪಾಜಿಟ್ ಹಣವು ದರಖಾಸ್ತುದಾರನ ಹೆಸರಿಗೆ ಹರಾಜು ನಿಂತಪಕ್ಷ ಅವನು ಈ ನೋಟಿಸ್ 4ನೇ ಕ್ಯಾಸ್ ಮೇರಿಗೆ ಕೊಡಬೇಕಾದ ಕೇವಡಾ 25 ರೂಪಾಯಿ ಹರಾಜ್ ಹಣದ ಡಿಪಾಜಿಟ್ಟಿಗೆ ವಜಾ ಮಾಡಲ್ಪಡುವದು, ಮತ್ತು ಇತರರು ಚಡದರಖಾಸ್ತು ಮಾಡಿ ಅವರಿಗೇನೇ ನಿಂತಪಕ್ಷ ದರಖಾಸ್ತುದಾರನ ಕೇವಣಿಯು ವಾಪಸ್ ಮಾಡಲ್ಪಡುವದು.

3. ಗೊತ್ತಾಗಲ್ಪಟ್ಟ ಖರೀದಿಯು ಸರ್ವೇ ಖರ್ಚನ್ನು ಅಡಗಿಸಿಕೊಂಡು ಯಿರುತ್ತಲ್ಲದೆ ಸಂದಲ್ ವಿನಹ ವುಳಿಸಿಕೊಳ್ಳಲ್ಪಟ್ಟ ಜಾತಿ ಯಲ್ಲ ಮರಗಳ ಗವರ್ಮೆಂಟ್ ಪಕ್ಕನ್ನು ಕೀರಿಸಿಕೊಂಡು ಯಿರುತ್ತೆ. ಸಂದಲ್ ಯಾವಾಗ್ಯೂ ಸರ್ಕಾರದ ಹಕ್ಕಿನದೇ ಆಗಿ ಯಿರುತ್ತೆ.

4. ಚಡದರಖಾಸ್ತುದಾರನು ಹರಾಜ್ ಖೈದಾದ ವಡನೆಯೇ ಕೇವಡಾ 25 ರೂಪಾಯಿಗಳ ಮೇರೆ ಕೊಡಬೇಕಲ್ಲದೆ ಬಾಕಿ ಹಣವನ್ನು ಜಾರಿಯಲ್ಲಿರುವ ರೂಲ್ಸ್ ಅನುಸರಿಸಿ ಹರಾಜಾದ ತಾರೀಖು ಲಾಗಾಯತು 15ನೇ ತಾರೀಖಿನ ದಿವಸದ ಸೂರ್ಯಾಸ್ತಮಯದೊಳಗೆ ಕೊಡಬೇಕು. ಹಾಗೆ ಕೊಡದೇ ತಪ್ಪಿದಲ್ಲಿ ಡಿಪಾಜಿಟ್ ಯಿಟ್ಟ ನೊಬಲಗು ದಂಡವಾಗಿ ತೆಗದುಕೊಳ್ಳುವದಲ್ಲದೆ ಹರಾಜಿನಲ್ಲಿ ತೆಗದುಕೊಂಡವನ ಅವಗುಣಕ್ಕಾಗಿ ವುನ್ಮ ಹರಾಜ್ ಮಾಡಿಸಲ್ಪಡುವದು. 2ನೇ ಹರಾಜಿನಲ್ಲಿ ಕಮ್ಮಿ ಆಗುವ ಹಣವನ್ನು ವೊದಲೆ ಹರಾಜ್‌ದಾರನಿಂದ ವಸೂಲ್ಮಾಡಲ್ಪಡುತ್ತೆ.

5. ಈ ರೂಲ್ಸ ಅನುಸರಿಸಿ ಹರಾಜು ಮಾಡಲ್ಪಟ್ಟ ಜಮೀನು ಮೂರು ವರುಷ ಮುಫತ್ತಾಗಿಯೂ ನಂತರ ಯರಡು ವರುಷ ಅರ್ಧ ಕಂದಾಯಕ್ಕೂ ಆರನೇ ವರುಷದಿಂದ ಪೂರಾ ಕಂದಾಯಕ್ಕೂ ಕೊಡಲ್ಪಡುವದು. ಈ ರಿಯಾಯತಿಯನ್ನು ತ್ಗೋರಿಸುವದಕ್ಕೆ ಮುಂಚೆ ಜಡ ದರಖಾಸ್ತುದಾರನು ಸದರೀ ಜಮೀನಿನಲ್ಲಿ ಯಿರತಕ್ಕ ಸಾಗುವಳೀಲಾಯಕ ಪ್ರದೇಶವನ್ನು ನಿಜವಾಗಿಯೂ ಗಿಡಹಾಕುವದಕ್ಕೆ ಯತ್ನಪಡದೆ ಆಡವಿಯನ್ನು ಹೆಗದು ಮರಗಳನ್ನು ಕಡಿದು ರಾಜೀನಾಮೆ ಕೊಟ್ಟಪ್ಪದ್ದೇ ಆದರೆ ಮೊದಲ ವರುಷದ ಲಗಾಯಕು ಪೂರಾ ಕಂದಾಯವನ್ನೂ ಸರಕಾರಕ್ಕೆ ಕೊಡಲು ಬದ್ಧನಾಗಿ ಮುಚ್ಚಳಿಕೆ ಬರೆದು ಕೊಡಬೇಕು.

ಸ್ಟೇಟ್‌ಮೆಂಟ್.

ಸರ್ವೇ ನಂಬರ್.	ದರಖಾಸ್ತು ದಾರನ ಹೆಸರು.	ಜಮೀನು ಇರತಕ್ಕ ಗ್ರಾಮದ ಹೆಸರು.	ಚಕ್ಕುಬಂದಿ.	ದರಖಾಸ್ತು ಜಮೀನು.			ಹರಾಜು ತಾರೀಖು ಮತ್ತು ಸ್ಥಳ.
				ವಿಸ್ತೀರ್ಣ.		ಆಕಾರ.	
				ಎಕರೆ.	ಗುಂಟೆ.		
33	ಸಿ॥ ಜೆ॥ ಬೆಲ್ಲರ್ಸ್ ಕಾ॥ ಫರಿಷ್.	ಬೈತಾವರ.	ಸರ್ವೆ ನಂಬರು 25ರ ಪೈಕಿ ಹೊಸದಾಗಿ ಫೋಡು ಮಾಡಿದ್ದು.	53	22	ಜಡದರಖಾಸ್ತುದಾರರ ಅಪೇಕ್ಷೆಯಂತೆ ಕಾಯಂದರ ಎಕರೆ 1ಕ್ಕೆ ರೂ ಬಾವಿ ತಾಲ್ಲೂಕು ಕಚೇರಿಯಲ್ಲಿ. ಪಾಯಿ 1-8-0 ಹಂಗಾಮಿ ರೂಪಾಯಿ 1	1889ನೇ ಜುಲೈ ತಾರೀಖು 25ನೇ ಗುರುವಾರ ಮಂಜರಾ

ಪಿ. ಎಸ್. ಪೂರ್ಣಯ್ಯ.
ಡಿಪ್ಯುಟಿ ಕಮ್ಮಿಷನರ.

ಕೋಲಾರ ದೊಡ್ಡವ್ಯಾಟೆ ಕಲ್ಲ್ಯಾಣ ತರಂಗಿಣಿ ಫಂಡ್ ಲಿಮಿಟೆಡ್ ಆಫಿಸಿನಿಂದ.

ಇದರಿಂದ ಬ್ಯಾಂಕ್ ಮಜಕೂರ್ ವಿಷ್ಯ ಷೇರದಾರ್‌ರಿಗೂ ಕೃತಪಡಿಸುವದೇನಂದರೆ, ಈ ಕಂಪನೀ ಸ್ಥಾಪನೆಆಗಿ ರಜಿಸ್ಟ್ರಾರ ತರ್ಫಾಯ ಮಾಡಿದ ರೆಜಲ್ಯೂಷ್ಯಗಳು ರಜಿಸ್ಟ್ರಾಗದೆ ಬ್ಯಾರೆ ಆಂದರೆ, ಹೊಸದಾಗಿ ರೆಜಲ್ಯೂಷ್ಯ ಮಾಡಿ ರಜಿಸ್ಟ್ರಿಗೆ ಕಳುಹಿಸಬೇಕೆಂತ ಚಾಲ್ತೀ ಇಸವಿ 6—5—89ನೇ ಮೇ 14ನೇ ನಂಬರು ಡಾಪ್ ಅಪ್ಪಣೆ ಆಗಿರುವದರಿಂದ ಇದರ ವ್ಯವಸ್ಥೇ ಬಗ್ಗೆ ಇದೇ ತಿಂಗಳು 20ನೇ ತಾರೀಖು ಪ್ರಾತಃಕಾಲ 7ಘಂಟೆಗೆ ವಿಷ್ಯರೂ ಬ್ಯಾಂಕಿಗೆ ದಯಮಾಡಿಸಬೇಕೆಂತ ಕೋರುತ್ತೇನೆ. ತಾ॥ 1—6—89.

ವೆಂಕಪ್ಪ ಯೇಜಂಟ್.

ಮೈಸೂರು ದೇಶೀ ಪರೀಕ್ಷೆ.

ಗವರ್ನಮೆಂಟ್ ತಯಾರೀ ಬಾಬತು ಸಿಂಕೋನಾಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ನಮೆಂಟ್ ಆಫಿಸರಗಳು ಕೊಂಡು ಕೊಳ್ಳಬಹುದು, ಬಂದು ಸಲಕ್ಕೆ ಇಪ್ಪತ್ತು ಪಾರ್ಸಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರ ದೆಕೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ ಔಷಧವುಳ್ಳ ತಗರದ ಡಬ್ಬೀ ಬಂದಕ್ಕೆ ರೂ. 3—14—0; ಎಂಟು ಔನ್ಸವುಳ್ಳ ಡಬ್ಬಿಗೆ ರೂ. 7—4—0; ಬಂದು ಪೌಂ ಔಷಧವುಳ್ಳ ಡಬ್ಬಿಗೆ ರೂ. 14—0—0; ಬೊಟಾನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಬದಗಿಸ ಬಹುದು; ನಾಲ್ಕು ಔನ್ಸವುಳ್ಳ ಡಬ್ಬಿಬಂದಕ್ಕೆ ರೂ. 4—14—0, ಎಂಟು ಔನ್ಸವುಳ್ಳ ಡಬ್ಬಿಗೆ ರೂ. 9—4—0, ಬಂದು ಪೌಂವುಳ್ಳ ಡಬ್ಬಿಗೆ 17 ರೂ. 8ಆಣೆ; ಈ ಔಷಧವು ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯರ್ಯ ವ ನೇಟೀವ್ ವರ್ತಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿವ್ಮತಿನೊಂದಿಗೆ ದರ 4 ಔನ್ಸ ತಗರದ ಡಬ್ಬಿಗೆ 4 ಆಣೆಯೂ 8 ಔನ್ಸ ತಗರದ ಡಬ್ಬಿಗೆ 8 ಆಣೆ ಟಪ್ಪಾಲ್ ಹಾಗಲೂ, ಬಂದು ಪೌಂ ಡಬ್ಬಿಗೆ ಹನ್ನೆರಹು ಆಣೆ ಹಾಗಲೂ ಕೊಡಬೇಕು.